ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಹೌದು

ಆ) ಮುಧೋಳ ಸ್ಟೇಷನ್ನಿನಲ್ಲಿ 110 : 11 ಕೆ.ವಿ. 10 ಎಂ.ವಿ.ಎ. ಸಾಮರ್ಥ್ಯದ ಎರಡು ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ ಒಂದು 10 ಎಂ.ವಿ.ಎ ಸಾಮರ್ಥ್ಯದ ಪರಿವರ್ತಕವನ್ನು 20 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕದ ಮೂಲಕ ಬದಲಾಯಿಸಲಾಗುತ್ತಿದೆ. 20 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು ಈಗಾಗಲೇ ಒದಗಿಸಿದ್ದು, ಅದರ ಜೋಡಣೆಯ ಕಾರ್ಯವೂ ಸಹಾ ಮುಗಿದಿದೆ. ಈ ಕಾರ್ಯಕ್ಕೆ ಬೇಕಾಗಿರುವ ಕೆಲವು ಸಾಮಗ್ರಿಗಳನ್ನು ಮುಖ್ಯವಾಗಿ 110 ಕೆ.ವಿ. ಸರ್ಕ್ಯೂಟ್ ಬ್ರೇಕರ್, 110 ಕೆ.ವಿ. ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 11 ಕೆ.ವಿ. ಸ್ವಿಚ್‌ಗೇರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಪರಿವರ್ತಕವನ್ನು ಅಳವಡಿಸಿ ಮತ್ತು ಚಾಲನೆಗೊಳಿಸಲು ದೀರ್ಘ ಅವಧಿಯವರೆಗೆ ವಿದ್ಯುತ್ ಸ್ಥಗಿತ (ಲೈನ್ ಕ್ಲಿಯರ್) ಗೊಳಿಸಬೇಕಾಗಿರುತ್ತದೆ. ಬೇಸಿಗೆಯ ಕಾಲ ಪ್ರಾರಂಭವಾಗಿದ್ದು, ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯು ಅತ್ಯಂತ ಜಾಸ್ತಿಯಾಗಿದ್ದು, ಈಗ ವಿದ್ಯುತ್ ಸ್ಥಗಿತಗೊಳಿಸುವುದು ಕಷ್ಟಕರವಾಗುತ್ತದೆ. ಏಪ್ರಿಲ್-99ರ ಮಧ್ಯಭಾಗದ ನಂತರ ನೀರಾವರಿ ಪಂಪುಸೆಟ್ಟುಗಳ ಬಳಕೆಯು ಕಡಿಮೆಗೊಳ್ಳುವುದರಿಂದ, ಆ ವೇಳೆಯಲ್ಲಿ ವಿದ್ಯುತ್ ಸ್ಥಗಿತಪಡಿಸಿ (ಲೈನ್ ಕ್ಲಿಯರ್) ಪರಿವರ್ತಕದ ಚಾಲನೆಯ ಕೆಲಸವನ್ನು ಚುರುಕುಗೊಳಿಸಲಾಗುವುದು.

ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ.

966 (1448) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳು ಯಾವುವು? ಸಂತೇಮಾರನಹಳ್ಳಿ ಕ್ಷೇತ್ರದ ಯಾವ ಪ್ರದೇಶ ಈ ಅಚ್ಚುಕಟ್ಟಿಗೆ ಸೇರಿದೆ ಕ್ಷೇತ್ರದ ವ್ಯಾಪ್ತಿಗೆ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ. (ವಿವರ ಒದಗಿಸುವುದು)

ಆ) ಮಲೆನಾಡು ಅಭಿವೃದ್ಧಿ ಯೋಜನೆ ಅಡಿ ಚಾಮರಾಜನಗರ ತಾಲ್ಲೂಕು ಮತ್ತು ಸಂತೇಮಾರನಹಳ್ಳಿ ಕ್ಷೇತ್ರದ ಅಭಿವೃದ್ಧಿ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ (ವಿವರ ನೀಡುವುದು).

ಇ) ಚಾಮರಾಜನಗರ ತಾಲ್ಲೂಕು ಸುವರ್ಣಾವತಿ ಮತ್ತು ಚಿಕ್ಕಹೊಳೆ ಅಣೆಕಟ್ಟುಗಳು, ಕಾವೇರಿ ಜಲಾನಯನ ವ್ಯಾಪ್ತಿಗೆ ಒಳಪಡುತ್ತವೆಯೇ ಇಲ್ಲದಿದ್ದಲ್ಲಿ ಒಳಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು).

ಶ್ರೀ ಕೆ. ವೆಂಕಟೇಶ್ (ಹಾಡಾ ರಾಜ್ಯ ಸಚಿವರು) :—

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿನ ಕಬಿನಿ, ಹಾರಂಗಿ, ಹೇಮಾವತಿ ಮತ್ತು ಕೃಷ್ಣರಾಜಸಾಗರ, ಈ ನಾಲ್ಕು ಬೃಹತ್ ನೀರಾವರಿ ಹಾಗೂ ನುಗು, ತಾರಕ, ಗುಂದಾಲ್, ಮಾಟಹೊಳೆ, ಕಣ, ಬೈರಮಂಗಲ, ಮಾರ್ಕೋನಹಳ್ಳಿ ಮತ್ತು ಮಂಚನಬೆಲೆ ಈ ಎಂಟು ಮಧ್ಯಮ ನೀರಾವರಿ ಯೋಜನೆಗಳ ಪ್ರದೇಶಗಳು, ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು, ಮೈಸೂರು ಇದರ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಸಂತೇಮಾರನಹಳ್ಳಿ ಕ್ಷೇತ್ರದಲ್ಲಿನ ಕಬಿನಿ ಯೋಜನೆಯ ಅಚ್ಚುಕಟ್ಟು ಪ್ರದೇಶ ಮಾತ್ರ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಗಳು, ಇದರ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

ಸದರಿ ಕ್ಷೇತ್ರದ ವ್ಯಾಪ್ತಿಗೆ ವರ್ಷವಾರು ಮಂಜೂರಾದ ಹಣ ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ವರ್ಷ	ಹೊಲಗಾಲುವೆ	ವಾರಾಬಂದಿ	ಆಯಕಟ್ಟು ರಸ್ತೆ
1992-93	3.07	1.86	4.82
1993-94	2.05	4.10	6.99
1994-95	--	3.02	8.27
1995-96	--	--	6.17
1996-97	15.88	--	7.23
1997-98	--	--	18.82

ಆ) ರೂ. ಲಕ್ಷಗಳಲ್ಲಿ

ವರ್ಷ	ಚಾಮರಾಜನಗರ ತಾಲ್ಲೂಕು	ಸಂತೇಮಾರನ ಹಳ್ಳಿ ಕ್ಷೇತ್ರ
1993-94	57.850	--
1994-95	94.158	--
1995-96	92.390	20.70
1996-97	55.059	30.64
1997-98	84.260	31.77
1998-99	142.950	49.69

೫) ಚಾಮರಾಜನಗರ ತಾಲ್ಲೂಕು ಸುವರ್ಣಾವತಿ ಮತ್ತು ಚಿಕ್ಕಹೊಳೆ ಆಣೆಕಟ್ಟುಗಳು ಹಾವೇರಿ ಜಲಾನಯನ ವ್ಯಾಪ್ತಿಗೆ ಒಳಪಡುತ್ತದೆ. ಆದರೆ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಹಾವೇರಿ ಜಲಾನಯನ ಯೋಜನೆಗಳು, ಮೈಸೂರು ಇವರ ಕಾರ್ಯವ್ಯಾಪ್ತಿಗೆ ಬರುವುದಿಲ್ಲ.

ನೀರಾವರಿ ಯೋಜನೆಗಳಿಗೆ ಹಣದ ಸಹಾಯ.

969(1362) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(a) The names of the major & medium irrigation projects taken up under financial assistance by Rural Infrastructure Development fund of NABARD;

(b) Project wise details may be furnished regarding estimate cost; yearwise and total financial assistance obtained from RIDF and financial assistance given by State Government; expenditure incurred on each project yearwise and time scheduled for the completion of each project;

(c) The conditions setforth by NABARD for the repayment of the loan?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. Votehole	1. ವೋಟಿಹೊಳೆ ಯೋಜನೆ
2. Lower Mullamari	2. ಮುಲ್ಲಾಮಾರಿ ಕೆಳದಂಡೆ ಯೋಜನೆ
3. Amarja	3. ಅಮರ್ಜ ಯೋಜನೆ
4. Chulkinala	4. ಚುಲ್ಕಿನಾಲಾ ಯೋಜನೆ
5. Maskinala	5. ಮಸ್ಕಿನಾಲಾ ಯೋಜನೆ
6. Manchanabele	6. ಮಂಚನಬೆಲೆ ಯೋಜನೆ
7. Bennithora	7. ಬೆನ್ನಿತೋರ ಯೋಜನೆ